ಮೈಸೂರ ಗೆಜಿಟ

ಸರ್ಕಾರದಿಂದ ಪ್ರಾಯಿಸ್ ಆದ್ದು.

ಬೆಂಗಳೂರು, ಶನಿವಾರ, ಮಾರ್ಚೀ ತಾ॥ 15, ಸ್ಕ್ 1884.

ಸೂಚನೆ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಕಮಿಷ್ಶರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾರ್ಷಿಯಲ್ ಡಿಪಾರ್ಟಮೆಂಟ.

1882ನೇ ಮೈಸೂರು ರೆಯ್ಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಆಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯ್ಯು ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ಸ್,
ಕಾಂಪ್ಟ್ರೋಲರ್.

ಬೆಂಗಳೂರು ತಾಲ್ಲೂಕು ಕಚ್ಚೇರಿಯಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಯಲಹಂಕದ ಕಸಬೆಯಲ್ಲಿರುವ ಹಳೀ ತಾಲ್ಲೂಕು ಕಚ್ಚೇರಿಯನ್ನು ಹರಾಜು ಮಾಡಬಹುದೆಂದು ದಿವಾ ಸುಹೆಬರವರ ಸಾಂಗರ್ಷ ಪ್ರೊಸೀಡಿಂಗ್ಸ್ ಅನುಸರಿಸಿ ಡಿಸ್ಟ್ರಿಕ್ಟ್ ಹುಜೂರಿಂದ ಮಾಹೇ ಗುಜಸ್ತಾ 21ನೇ ಮುಕ್ತಂ 932ನೇ ನಂಬರ್ ಹುಕ್ಕುಂ ಸಾದರಾಗಿರುವ ಪ್ರಕಾರ ಹರಾಜು ಆಗತಕ್ಕ ಕಚ್ಚೇರಿ ನಿವೇಶನದ ಚಕ್ಕ ಬಂದಿ ತಪಸೀಲ್.

1 ಪೂರ್ವಕ್ಕೆ ಮುನಕೆಟ್ಟ ಹರಾಜಿನಲ್ಲಿ ಪಡದ ಖಾಲೀ ಜಮೀನು ಮತ್ತು ಸರಕಾರದ ಖಾಲೀ ಜಮೀನು ಸಹಾ.

1 ಪಶ್ಚಿಮಕ್ಕೆ ಕೋಟೇ ವಳಕ್ಕೆ ಹೋಗುವದಾರಿ.

1 ಉತ್ತರಕ್ಕೆ ಹೊನ್ನಪ್ಪನ ಮನೆ.

1 ದಕ್ಷಿಣಕ್ಕೆ ಕೋಟೇವಳಕ್ಕೆ ಹೋಗುವ ದಾರಿ.